ಸಾಕ್ಷಿಯನ್ನು 07.09.2022 ರಂದು ಕರೆಸಿ ಪ್ರಮಾಣವಚನ ಮಾಡಿಸಲಾಯಿತು. **ಡಿ.ಡಬ್ಲ್ಯೂ-1**

ಪಾಟೀ ಸವಾಲುಃ ವಾದಿಪರ ವಕೀಲರಿಂದಃ

1. ನಾನು ಎಸ್ ಎಸ್ ಎಲ್ ಸಿ ವರೆಗೆ ಓದಿರುತ್ತೇನೆ. ನಾನು ವ್ಯವಸಾಯ ಮಾಡುತ್ತೇನೆ. ನಾನು ಕೊಂಡದಮ್ಮನಪುರದಲ್ಲಿ ವಾಸ ಇದ್ದೇನೆ. ನಾನು ಅಲ್ಲಿ ಸುಮಾರು 30-35 ವರ್ಷಗಳಿಂದ ನಾನು , ನನ್ನ ತಾಯಿ ಮತ್ತು ನನ್ನ ಹೆಂಡತಿ ವಾಸ ಇದ್ದೇನೆ. ನಾನು ವಿಳಾಸದ ಬಗ್ಗೆ ದಾಖಲೆಯನ್ನು ಹಾಜರುಪಡಿಸಿರುತ್ತೇನೆ. ನಮ್ಮ ಕುಟುಂಬ ಪಡಿತರ ಚೀಟಿಯನ್ನು ನೀಡಿರುತ್ತೇನೆ. ಕೊಂಡದಮ್ಮನಪುರದಲ್ಲಿ ಮತಚಲಾಯಿಸಿದ ಬಗ್ಗೆ ದಾಖಲೆಯನ್ನು ಕೊಟ್ಟಿರುತ್ತೇನೆ. ನನ್ನ ತಂದೆಯ ಒಡಹುಟ್ಟಿದವರು 3 ಜನ. ಅವರುಗಳು ಬೀರಯ್ಯ , ಆನಂದ ಹಾಗೂ ಲೋಕೇಶ. ನಾನು ಮದ್ದೂರು ತಾಲ್ಲೂಕು , ಸಿ.ಎ ಕೆರೆ ಹೋಬಳಿ , ಕಾಡನಪುರದದೊಡ್ಡಿಯಲ್ಲಿ ವಾಸ ಇದ್ದೇನೆ ಎಂದರೆ ಸರಿಯಲ್ಲ. ನಾನು ಕೊಂಡದಮ್ಮನಪುರದಲ್ಲಿ ವಾಸ ಇಲ್ಲ ಎಂದರೆ ಸರಿಯಲ್ಲ. ನನ್ನ ತಂದೆ ಅಬಕಾರಿ ಇಲಾಖೆಯಲ್ಲಿ ಕೆಲಸ ಮಾಡುತ್ತಿದ್ದರು. ನನ್ನ ತಾಯಿ , ತಂದೆ ಮತ್ತು ನನ್ನ ದೊಡ್ಡಣ್ಣ ಬೀರಯ್ಯ ಮತ್ತು ಆತನ ಹೆಂಡತಿ ಸುನಂದಮ್ಮ ಮತ್ತು ಅವರ ಮಗಳು ಸಿಂಧು ಅಂದರೆ ವಾದಿ ಮಾತ್ರ ಕೊಂಡದಮ್ಮನಪುರದಲ್ಲಿ ವಾಸ ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ. ಕಾಡನಪುರದದೊಡ್ಡಿಯಲ್ಲಿ ನಮ್ಮ ವಾಸದ ಮನೆ ಇದೆ ಎಂದರೆ ಸರಿ. ನಾನು ಕಾಡನಪುರದದೊಡ್ಡಿಯಲ್ಲಿ ಮತಚಲಾಯಿಸುವುದು ಎಂದರೆ ಸುಳ್ಳು. ಪಡಿತರ ಚೀಟಿ ಕೂಡ ಕಾಡನಪುರದದೊಡ್ಡಿಯಲ್ಲೇ ಇದೆ ಎಂದರೆ ಸರಿಯಲ್ಲ. ಕೊಂಡದಮ್ಮನಪುರದಲ್ಲಿ ಒಟ್ಟು 5 ಎಕರೆ ಜಮೀನು ಇದ್ದು ಅದರಲ್ಲಿ 20 ಗುಂಟೆ ಖರಾಬು ಇದೆ. ಸದರಿ ಜಮೀನಿನಲ್ಲಿ ಬಾಳೆ, ಭತ್ತ , ಹಿಪ್ಪುನೇರಳೆ, ಹಾಗೂ ಅರಿಶಿಣವನ್ನು ಬೆಳೆಯುತ್ತಾರೆ. ನನ್ನ ತಂದೆ ಬೀರಯ್ಯ 21.01.2018 ರಲ್ಲಿ ತೀರಿಕೊಂಡಿರುತ್ತಾರೆ. ನನ್ನ ತಾಯಿ ಕೂಡ 19.07.2018 ರಂದು ತೀರಿಕೊಂಡಿರುತ್ತಾರೆ. ನಾನು ಯಾವತ್ತು ಕೊಂಡದಮ್ಮನಪುರದಲ್ಲಿ ವಾಸ ಇಲ್ಲ ಎಂದರೆ ಸರಿಯಲ್ಲ. ಕೊಂಡದಮ್ಮನಪುರದಲ್ಲಿ ನನ್ನ ತಂದೆ , ತಾಯಿ ಮತ್ತು ನನ್ನ ಅಣ್ಣ ಬೀರಯ್ಯ , ಸುನಂದಮ್ಮ ಹಾಗೂ ವಾದಿ ವಾಸ ಇದ್ದರು ಎಂದರೆ ಸರಿಯಲ್ಲ. ಸದರಿಯವರು ಕೊಂಡದಮ್ಮನಪುರದಲ್ಲಿ ತೆಂಗು , ಬಾಳೆ , ಅರಿಶಿಣವನ್ನು ಬೆಳೆಯತ್ತಿದ್ದಾರೆ ಎಂದರೆ ಸರಿಯಲ್ಲ. ನನ್ನ ಅಣ್ಣ 2007 ರಲ್ಲಿ ತೀರಿಕೊಂಡಿರುತ್ತಾರೆ ದಿನಾಂಕ ನೆನಪಿಲ್ಲ. ಸುನಂದಮ್ಮ ಅಂದರೆ ನನ್ನ ಅತ್ತಿಗೆ ಎಲ್ಲಿ ವಾಸ ಇದ್ದಾರೆ ಎಂದು ನನಗೆ ಗೊತ್ತಿಲ್ಲ. ಸುನಂದಮ್ಮ ಯಾವ ಊರಿನವರು ಎಂದು ನನಗೆ ಗೊತ್ತಿಲ್ಲ.

2. ಕಾಡನಪುರದದೊಡ್ಡಿಯ ಶಿವಮಲ್ಲಯ್ಯ ಬಿನ್ ಚಿಕ್ಕಕಾಳಯ್ಯ ಎಂದರೆ ಯಾರು ಎಂದು ನನಗೆ ಗೊತ್ತಿಲ್ಲ. ನನ್ನ ತಾಯಿ ಕಾಡನಪುರದದೊಡ್ಡಿ ಗ್ರಾಮದವರು. ನನ್ನ ತಾಯಿಯ ಒಡಹುಟ್ಟಿದವರು 5 ಜನ. ಅವರ ಹೆಸರು ಗಂಗಮ್ಮ , ಕಾಳಯ್ಯ , ನಾಗರಾಜು, ಗೌರಮ್ಮ , ಚಿಕ್ಕತಾಯಮ್ಮ. ಕೊಂಡದಮ್ಮನಪುರದ ನಮ್ಮ ಜಮೀನಿನ ಪಕ್ಕದಲ್ಲಿ ಇರುವ ಶಿವಮಲ್ಲಯ್ಯ ಊರು ಯಾವುದು ಎಂದು ನನಗೆ ಗೊತ್ತಿಲ್ಲ. ಶಿವಮಲ್ಲಯ್ಯನ ಜಮೀನು ಯಾವ ಸರ್ವೆ ನಂಬರಿನಲ್ಲಿ ಇದೆ ಎಂದು ನನಗೆ ಗೊತ್ತಿಲ್ಲ. ನನ್ನ ತಾಯಿ ಬದುಕಿದ್ದಾಗ ಹಸು ಸಾಗಾಣಿಕೆ , ಹಿಪ್ಪುನೇರಳೆ ಬೆಳೆಯುವುದು ಮಾಡುತ್ತಿದ್ದರು.

3. ದಾವಾ ಸ್ವತ್ತು ನನ್ನ ತಾಯಿಗೆ ದರಕಾಸ್ತು ಮೂಲಕ ಬಂದಿರುತ್ತದೆ. 1993 ರಲ್ಲಿ ಬಂದಿರುತ್ತದೆ. ನನ್ನ ತಂದೆ 2001 ರಲ್ಲಿ ನಿವೃತ್ತಿ ಹೊಂದಿರುತ್ತಾರೆ. ನನ್ನ ತಾಯಿಗೆ ದಾವಾ ಸ್ವತ್ತು ಮಂಜೂರಾದಂತಹ ಸಂದರ್ಬದಲ್ಲಿ ನನ್ನ ತಂದೆ ಸರ್ಕಾರಿ ಕೆಲಸದಲ್ಲಿ ಇದ್ದರು ಎಂದರೆ ಸರಿ. ಮನೆಯ ವ್ಯವಹಾರ ಖರ್ಚು ವೆಚ್ಚವನ್ನು ನನ್ನ ತಂದೆ ನೋಡಿಕೊಳ್ಳುತ್ತಿದ್ದರು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ನನ್ನ ತಾಯಿ ನೋಡಿಕೊಳ್ಳುತ್ತಿದ್ದರು ಎಂದು ನುಡಿದಿದ್ದಾರೆ. ದಾವಾ ಸ್ವತ್ತು ಮಂಜೂರಾಗುವ ಮೊದಲು ನನ್ನ ತಾಯಿಯ ಹೆಸರಿನಲ್ಲಿ ಬೇರೆ ಯಾವುದೇ ಜಮೀನು ಇರಲಿಲ್ಲ. ದಾವಾ ಸ್ವತ್ತು ನಮ್ಮ ತಾಯಿಗೆ ಮಂಜೂರಾಗುವ ಮೊದಲು ಅವರು ಕಾಡನಪುರದದೊಡ್ಡಿಯಲ್ಲಿ ವಾಸ ಇದ್ದರು. ನನ್ನ ತಾಯಿ ನನ್ನ ತಂದೆಯ ಸಂಬಳದಿಂದ ಜೀವನ ಮಾಡುತ್ತಿದ್ದರು. ದಾವಾ ಸ್ವತ್ತು ಮಂಜೂರಾಗುವ ಸಮಯದಲ್ಲಿ ಕಿಮ್ಮತ್ತನ್ನು ನನ್ನ ತಂದೆಯ ಸಂಬಳದಲ್ಲೆ ಕಟ್ಟಿದ್ದಾರೆ ಎಂದರೆ ಸರಿಯಲ್ಲ. ನನ್ನ ತಾಯಿಗೆ ಮಂಜೂರಾದಂತಹ ಜಮೀನಿನಲ್ಲಿ ಯಾವುದೇ ಫಸಲು ಇರಲಿಲ್ಲ ಎಂದರೆ ಸರಿ. ಸದರಿ ಜಮೀನು ವ್ಯವಸಾಯಕ್ಕೆ ಯೋಗ್ಯವಾಗಿರಲಿಲ್ಲ ಎಂದರೆ ಸರಿ. ಸದರಿ ಜಮೀನನ್ನು ನನ್ನ ಅಣ್ಣ ಬೀರಯ್ಯ ಮಟ್ಟಮಾಡಿ ವ್ಯವಸಾಯಕ್ಕೆ ಯೋಗ್ಯವಾಗುವಂತೆ ಮಾಡಿದ್ದಾರೆ ಎಂದರೆ ಸರಿಯಲ್ಲ. ನನ್ನ ಅಣ್ಣ ಬೀರಯ್ಯ ಮಂಜೂರಾದಂತಹ ಜಮೀನಿನಲ್ಲಿ ಮನೆ ಕಟ್ಟಿಕೊಂಡು ನನ್ನ ತಂದೆ ಮತ್ತು ತಾಯಿ ಜೊತೆ ವಾಸದ ಇದ್ದರು ಎಂದರೆ ಸರಿಯಲ್ಲ. ದಾವಾ ಸ್ವತ್ತಿನಲ್ಲಿ ವಾಸದ ಮನೆ ಇದೆ ಎಂದರೆ ಸರಿ. ಅದಕ್ಕೆ ವಿದ್ಯುಚ್ಛಕ್ತಿ ಸೌಲಭ್ಯವನ್ನು ಪಡೆದುಕೊಂಡಿದ್ದೇವೆ ಎಂದರೆ ಸರಿ. ಸದರಿ ವಿದ್ಯುಚ್ಛಕ್ತಿ ಸಂಪರ್ಕ ನನ್ನ ತಾಯಿಯ ಹೆಸರಿನಲ್ಲಿ ಇದೆ. ವಿದ್ಯುಚ್ಛಕ್ತಿಯ ಬಿಲ್ಲನ್ನು ಬೀರಯ್ಯನ ಹೆಂಡತಿ ಸುನಂದಮ್ಮ

ಪಾವತಿ ಮಾಡುತ್ತಿದ್ದರು ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ನನ್ನ ಅಣ್ಣ ಬೀರಯ್ಯ ಅವರ ಹೆಂಡತಿ ಸುನಂದಮ್ಮ ವಾಸ ಮಾಡಿಕೊಂಡಿದ್ದರು ಎಂದರೆ ಸರಿಯಲ್ಲ. ನನ್ನ ಅತ್ತಿಗೆ ಸುನಂದಮ್ಮ ವ್ಯವಸಾಯದಲ್ಲಿ ತನ್ನ ಗಂಡನಿಗೆ ಸಹಾಯ ಮಾಡುತ್ತಿದ್ದರು ಎಂದರೆ ಸರಿಯಲ್ಲ. ನನ್ನ ಅಣ್ಣ ಬೀರಯ್ಯ ತನ್ನ ತಂದೆ ತಾಯಿ , ಸುನಂದಮ್ಮರವರನ್ನು ಸರಿಯಾಗಿ ನೋಡಿಕೊಳ್ಳಲಿಲ್ಲ ಎಂದರೆ ಸರಿಯಲ್ಲ. ಆ ಕಾರಣದಿಂದ ಸುನಂದಮ್ಮ ತನ್ನ ತವರು ಮನೆ ಕೊಳ್ಳೇಗಾಲ ತಾಲ್ಲೂಕು ನರೀಪುರಕ್ಕೆ ಹೋಗಿದ್ದಾರೆ ಎಂದರೆ ಸರಿಯಲ್ಲ. ವಾದಿಯ ವಿದ್ಯಾಭ್ಯಾಸವನ್ನು ಸುನಂದಮ್ಮರವರೆ ಮಾಡಿಸಿರುತ್ತಾರೆ ಎಂದರೆ ಸರಿಯಲ್ಲ. ನಂತರ ವಾದಿಯ ಮದುವೆಯನ್ನು ಟಿ. ನರಸೀಪುರ ತಾಲ್ಲೂಕು , ಕರುವಟ್ಟಿ ಗ್ರಾಮದ ಲಿಂಗರಾಜು ಎಂಬುವವರಿಗೆ ಕೊಟ್ಟು ಸುನಂದಮ್ಮರವರೆ ಮಾಡಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸುನಂದಮ್ಮ ಹಾಗೂ ವಾದಿಯನ್ನು ನಾನು ಮತ್ತು ನನ್ನ ತಂದೆ ತಾಯಿ ಸಂಪೂರ್ಣವಾಗಿ ನಿರ್ಲಕ್ಷ ಮಾಡಿ ಹೊರಹಾಕಿದ್ದೇವೆ ಎಂದರೆ ಸರಿಯಲ್ಲ. ಸುನಂದಮ್ಮ ತಮ್ಮ ವಕೀಲರ ಮೂಲಕ ನನ್ನ ತಂದೆ ತಾಯಿಗೆ ಭಾಗಾಂಶ ಕೋರಿ ನೋಟಿಸನ್ನು ನೀಡಿದ್ದಾರೆ ಎಂದರೆ ಸರಿ. ಆ ರೀತಿ ನೋಟಿಸನ್ನು ನೀಡಿದ್ದರು ಕೂಡ ನಾವು ವಾದಿಗೆ ಯಾವುದೇ ಭಾಗಾಂಶವನ್ನು ನೀಡಿಲ್ಲ ಎಂದರೆ ಸರಿಯಲ್ಲ. ಆ ರೀತಿ ನೋಟಿಸು ಕೊಟ್ಟ ನಂತರ ವಿಲ್ ಮೂಲಕ ನನ್ನ ಹೆಸರಿಗೆ ದಾವಾ ಆಸ್ತಿಯನ್ನು ಮಾಡಿಕೊಂಡಿದ್ದೇನೆ ಎಂದರೆ ಸರಿಯಲ್ಲ.

4. ನನ್ನ ತಂದೆ ಸರ್ಕಾರಿ ನೌಕರಿಯಲ್ಲಿ ಇದ್ದದರಿಂದ ಅವರ ಸಂಬಳದ ಹಣ ಕೊಟ್ಟು ದಾವಾ ಆಸ್ತಿಯನ್ನು ನನ್ನ ತಾಯಿಯ ಹೆಸರಿಗೆ ಮಂಜೂರು ಮಾಡಿಸಿರುತ್ತಾರೆ ಎಂದರೆ ಸುಳ್ಳು. ನನ್ನ ಮುಖ್ಯ ವಿಚಾರಣೆ ಪ್ಯಾರ ನಂ. 3 ರಲ್ಲಿ ನನ್ನ ಅಣ್ಣ ಬೆಂಗಳೂರಿನಲ್ಲಿ ಗಿರಿಜಮ್ಮ ಎಂಬುವರ ಜೊತೆ ವಿವಾಹ ಆಗಿದ್ದು ಅವರಿಗೆ ಇಬ್ಬರು ಮಕ್ಕಳಿದ್ದು ನನ್ನ ಅಣ್ಣ ಬೆಂಗಳೂರಿನಲ್ಲಿ ವಾಸವಾಗಿದ್ದು 2007 ಇಸವಿಯಲ್ಲಿ ಮರಣ ಹೊಂದಿದ್ದಾರೆ ಎಂಬ ಬಗ್ಗೆ ನಾನು ಯಾವುದೆ ದಾಖಲೆಯನ್ನು ಹಾಜರುಪಡಿಸಿರುವುದಿಲ್ಲ. ವಾದಿಯಿಂದ ನೋಟಿಸು ಹೋಗಿ ಈ ದಾವೆ ಹಾಕಿದ ನಂತರ ನಾನು ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದ 3 ನೆ ಪ್ಯಾರವನ್ನು ಸೃಷ್ಟಿಮಾಡಿ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ನನ್ನ ಅಣ್ಣ ಗಿರಿಜಮ್ಮ ಎಂಬುವರನ್ನು ಯಾವತ್ತು ಮದುವೆ ಆಗಿರುವುದಿಲ್ಲ ಎಂದರೆ ಸರಿಯಲ್ಲ. ಗಿರಿಜಮ್ಮ ಮತ್ತು ಅವರ ಮಕ್ಕಳು ಬೆಂಗಳೂರಿನಲ್ಲಿ ವಾಸಸಿಸುತ್ತಿರುವ ಬಗ್ಗೆ ಪಡಿತರ ಚೀಟಿ ಅಥವಾ ಚುನಾವಣಾ ಗುರುತಿನ ಚೀಟಿಯನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿ. ನನ್ನ

ಅಣ್ಣ ಬೆಂಗಳೂರಿನಲ್ಲಿ ಮೃತಹೊಂದಿದ ಬಗ್ಗೆ ದಾಖಲೆಯನ್ನು ಕೊಟ್ಟಿಲ್ಲ. ನನ್ನ ಅಣ್ಣ ಕೊಂಡದಮ್ಮನಪುರದಲ್ಲಿ ತೀರಿಕೊಂಡಿದ್ದು ಎಂದರೆ ಸರಿಯಲ್ಲ. ವಾದಿ ಮತ್ತು ಅವರ ತಾಯಿ ನನ್ನ ಅಣ್ಣನ ವಾರಸುದಾರರು ಎಂದರೆ ಸರಿಯಲ್ಲ. ವಾದಿಗೆ ಭಾಗಾಂಶ ಕೊಡಬೇಕಾಗುತ್ತದೆ ಎಂದು ನಾನು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಶಿವಮಲ್ಲಯ್ಯರವರು ನನ್ನ ಸೋದರ ಮಾವ ಎಂದರೆ ಸರಿ. ಆದರೂ ಕೂಡ ನಾನು ಅವರು ಯಾರು ಎಂದು ನನಗೆಗ ೊತ್ತಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಯ ಶಾಲಾ ದಾಖಲೆಗಳಲ್ಲಿ ತಂದೆಯ ಹೆಸರನ್ನು ಬೀರಯ್ಯ ಎಂದು ನಮೂದಿಸಲಾಗಿದೆ ಎಂದರೆ ಸರಿಯಲ್ಲ. ಸುನಂದಮ್ಮ ನನ್ನ ಅಣ್ಣನ ಹೆಂಡತಿ , ವಾದಿ ನನ್ನ ಅಣ್ಣನ ಮಗಳು ಎಂಬ ವಿಚಾರ ನನಗೆ ಗೊತ್ತಿದ್ದರು ಕೂಡ ಅವರಿಗೆ ಭಾಗಾಂಶ ಕೊಡಬೇಕಾಗುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

5. ನನ್ನ ತಾಯಿಗೆ ಮಂಜೂರಾದ ಜಮೀನಿನ ದಾಖಲಾತಿಗಳು ಅವರು ತೀರಿಕೊಂಡ ನಂತರ ನನ್ನ ಹೆಸರಿಗೆ ವರ್ಗಾವಣೆಯಾಗಿರುತ್ತದೆ. ವಾದಿಗೆ ಮೋಸಮಾಡುವ ಉದ್ದೇಶದಿಂದ ಕಂದಾಯ ದಾಖಲೆಗಳನ್ನು ನನ್ನ ಹೆಸರಿಗೆ ಸೃಷ್ಟಿಮಾಡಿಕೊಂಡಿದ್ದೇನೆ ಎಂದರೆ ಸರಿಯಲ್ಲ. ವಾದಿಯವರು ಭಾಗಾಂಶ ಕೋರಿ ನೋಟಿಸನ್ನು ಕಳುಹಿಸಿದ ಮೇಲೆ ನಾನು ಸುಳ್ಳು ವಿಲ್ ನಾಮೆಯನ್ನು ಸೃಷ್ಟಿ ಮಾಡಿದ್ದೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತು ಒಟ್ಟು ಕುಟುಂಬದ ಆಸ್ತಿ ಎಂದರೆ ಸರಿಯಲ್ಲ. ಒಟ್ಟು ಕುಟುಂಬದ ಆಸ್ತಿ ಆಗಿದ್ದರು ನಾನು ನನ್ನ ಹೆಸರಿಗೆ ವಿಲ್ ಮಾಡಿರುವುದರಿಂದ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ಸಾಕ್ಷಿಯ ಹೇಳಿಕೆಯನ್ನು ಬಹಿರಂಗ ನ್ಯಾಯಾಲಯದಲ್ಲಿ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ.ಸ.ಇ.

ಪಿ.ಸಿ.ಜೆ. ಮತ್ತು ಜೆಎಂಎಫ್‌ಸಿ,
ಮಳವಳ್ಳಿ